ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 12-7-2016

# ಪತ್ರಿಕಾ ಪ್ರಕಟಣೆ

## ಕರ್ನಾಟಕ ವಿಧಾನ ಮಂಡಲದಲ್ಲಿ ಇಂದು:

### ಸಂತಾಪ ಸೂಚನೆ:

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ಇಂದು ಮುಂಜಾನೆ ರಾಜ್ಯ ವಿಧಾನ ಸಭೆಯ ಅಧಿವೇಶನ ಆರಂಭವಾಗುತ್ತಿದ್ದಂತೆಯೇ ನಿಧನರಾದ ಮಾಜಿ ಶಾಸಕ ವಸಂತರಾವ್ ಪಾಟೀಲ್ ಅವರ ನಿಧನಕ್ಕೆ ರಾಜ್ಯ ವಿಧಾನ ಸಭಾಧ್ಯಕ್ಷ ಕೆ.ಬಿ. ಕೋಳಿವಾಡ್ ಅವರು ಸಂತಾಪ ಸೂಚನೆ ಮಂಡಿಸಿದರು. ನಂತರ ವಿಧಾನ ಸಭೆಯು ಎದ್ದುನಿಂತು ಒಂದು ನಿಮಿಷ ಮೌನ ಆಚರಿಸಿತು.

ಬಾಬು/ಕೆಎಂ

### ತೆಂಗು ಬೆಳೆ: ಸಂಕಷ್ಟದಲ್ಲಿರುವ ರೈತರ ಬಗ್ಗೆ ಚರ್ಚೆ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ಇಂದು ವಿಧಾನ ಸಭೆಯಲ್ಲಿ ಜನತಾದಳ (ಜಾತ್ಯಾತೀತ) ಶಾಸಕರುಗಳಾದ ವೈ.ಎಸ್.ವಿ. ದತ್ತಾ, ಹೆಚ್.ಡಿ. ರೇವಣ್ಣ ಹಾಗೂ ಶಿವಲಿಂಗೇಗೌಡ ಅವರು ವಿಧಾನ ಸಭೆಯಲ್ಲಿ ನಿಯಮ 62ರ ಅಡಿಯಲ್ಲಿ ತೆಂಗು ಮತ್ತು ಕೊಬ್ಬರಿ ಬೆಳೆ ಕುಸಿತ ಕುರಿತಂತೆ ರೈತರಿಗೆ ಆಗುತ್ತಿರುವ ಹಾನಿ ಆಗು ಸಂಕಷ್ಟ ಕುರಿತಂತೆ ಸೂಚನೆ ಮಂಡಿಸಿದರು. ಇದಕ್ಕೆ ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ಅವರು ದನಿಗೂಡಿಸಿ ಈ ಬಗ್ಗೆ ವಿವರ ಚರ್ಚೆ ಅಗತ್ಯ ಇದೆ ಎಂದು ಪ್ರತಿಪಾದಿಸಿದರು. ಸಭಾಧ್ಯಕ್ಷ ಕೆ.ಬಿ. ಕೋಳಿವಾಡ್ ಅವರು ವಿಷಯವನ್ನು ನಿಯಮ 69 ರಡಿ ಚರ್ಚೆಗೆ ಅವಕಾಶ ನೀಡುವುದಾಗಿ ತಿಳಿಸಿದರು.

ಬಾಬು/ಕೆಎಂ

## ಹಣಕಾಸು ನೆರವು

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿನ ಐತಿಹಾಸಿಕ ದಾಖಲೆಗಳ ಸಂರಕ್ಷಣೆಗೆ ಹಣಕಾಸು ನೆರವು 2016-17ನೇ ಸಾಲಿನ ನೆರವಿನ ಯೋಜನೆಯಡಿ ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ಅಮೂಲ್ಯ ದಾಖಲೆಗಳು ಐತಿಹಾಸಿಕ ದಾಖಲೆಗಳು, ಪತ್ರಾಗಾರಕ್ಕೆ ಯೋಗ್ಯವಾದ ಛಾಯಾಚಿತ್ರಗಳು, ಮುದ್ರಣಗಳನ್ನು ಜೋಪಾನಪಡಿಸುವಿಕೆ/ಸಂರಕ್ಷಿಸುವಿಕೆ, ದುರಸ್ತಿ, ಪ್ರಕಟಣೆ, ಪಟ್ಟಿ ಮಾಡುವಿಕೆ, ಮಾರ್ಗದರ್ಶಕಗಳ ಸಂಗ್ರಹಣೆ, ಮೈಕ್ರೋಫಿಲ್ಮಿಂಗ್ ಹಾಗೂ ಡಿಜಿಟೈಜ್, ಇವುಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕಾಗಿ ಕಂಪ್ಯೂಟರ್/ವ್ಯಾಕ್ಯೂಂ ಕ್ಲೀನರ್/ಸ್ಕ್ಯಾನರ್/ರೆಪ್ರೋಗ್ರಾಫಿ ಸಂರಕ್ಷಣೆಗೊಳಿಸುವುದಕ್ಕಾಗಿ ರಾಷ್ಟ್ರೀಯ ಪತ್ರಾಗಾರ, ನವದೆಹಲಿ, ನೊಂದಾಯಿತ ಸ್ವಯಂ ಸಂಘ/ಸಂಸ್ಥೆಗಳು, ವ್ಯಕ್ತಿಗಳು, ವಿಶ್ವವಿದ್ಯಾಲಯಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಯೋಜನೆಯಡಿ ವಿಸ್ತರಿಸಬಹುದಾದ ಹಣಕಾಸು ನೆರವಿನ ಗರಿಷ್ಠ ಮಿತಿಯು ರೂ. 10.00 ಲಕ್ಷವಾಗಿರುತ್ತದೆ. ಮತ್ತು ಯೋಜನೆಯ ಒಟ್ಟು ವೆಚ್ಚದ 75:25 ಅನುಪಾತದಲ್ಲಿರುತ್ತದೆ. ನಿಗದಿತ ನಮೂನೆಯಲ್ಲಿರುವ ಅರ್ಜಿಗಳನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮೊದಲನೇ ಮಹಡಿ, ಕೊಠಡಿ ಸಂಖ್ಯೆ 126, ವಿಕಾಸ ಸೌಧ, ಬೆಂಗಳೂರು -01 ಇವರಿಗೆ ದಿನಾಂಕ: 5-7-2016 ರಂದು ಸಂಜೆ ಒಳಗೆ ತಲುಪಿಸುವುದು. ರಾಜ್ಯಮಟ್ಟದ ಶೋಧಕ ಸಮಿತಿಯು ಆಹ್ವಾನಿತ ಅರ್ಜಿಗಳನ್ನು ಪರಿಶೀಲಿಸಿ ಆಯ್ಕೆ ಪಟ್ಟಿಯನ್ನು ಛೇರ್ಮನ್, ಗ್ರಾಂಟ್ ಕಮಿಟಿ ಅಂಡ್ ಡೈರಕ್ಟರ್ ಜನರಲ್ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾ, ಜನಪತ್ ನವದೆಹಲಿ – 110 001 ಇವರಿಗೆ ಕಳುಹಿಸಲಾಗುವುದು.

ನಿಗದಿತ ಅರ್ಜಿ ನಮೂನೆ ಹಾಗೂ ವಿವರಗಳಿಗೆ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾದ ವೆಬ್‌ಸೈಟ್ **www.national archives.nic.in. Section Grants-in-aid on home page** ನೋಡಬಹುದಾಗಿದೆ.

ಬಾಬು/ಕೆಎಂ

# ಅವಧಿ ವಿಸ್ತರಣೆ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಕರ್ನಾಟಕ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗ್ರೂಪ್ 'ಎ' ವೃಂದದ 25 ಹುದ್ದೆಗಳನ್ನು ಭರ್ತಿ ಮಾಡಲು ದಿ: 8-6-2016 ರಂದು ಅಧಿಸೂಚನೆ ಹೊರಡಿಸಿದ್ದು, ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಭರ್ತಿ ಮಾಡುವ ಕೊನೆಯ ದಿನಾಂಕವನ್ನು 15-7-2016 ರವರೆಗೆ ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ: 16-7-2016 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆಯೋಗದ ವೆಬ್‌ಸೈಟ್**http://kpsc.kar.nic.in/Notification** ಅನ್ನು ನೋಡಬಹುದಾಗಿದೆ.

ಬಾಬು/ಕೆಎಂ

# ಜಿಲ್ಲಾ ಬಂಜಾರ  ಸಮುದಾಯ ಉದ್ಘಾಟನೆ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ಚಿತ್ರದುರ್ಗದಲ್ಲಿ ಬಂಜಾರ ಸಮುದಾಯದ ಸಾಂಸ್ಕೃತಿಕ ಮತ್ತು ಸಾಮಾಜಿಕ ಬೆಳವಣಿಗೆಯ ಉಪಯೋಗಕ್ಕೆ ಜಿಲ್ಲಾ ಬಂಜಾರ ಭವನವನ್ನು ನಿರ್ಮಿಸಲಾಗಿದೆ. ಜುಲೈ 23 ರಂದು  ಬಂಜಾರ ಭವನವನ್ನು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ನೆರವೇರಿಸುವರು ಎಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ಜಲಜಾನಾಯಕ ಅವರು ತಿಳಿಸಿದ್ದಾರೆ.

ಬಾಬು/ಕೆಎಂ

# ಫಲಿತಾಂಶ ಪ್ರಕಟ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ಆಯೋಗದ ದಿನಾಂಕ: 21-11-2015 ರ ಅಧಿಸೂಚನೆಯಲ್ಲಿ ತಾಂತ್ರಿಕ/ತಾಂತ್ರಿಕೇತರ ಹುದ್ದೆಗಳ ಮತ್ತು 04-2-2016 ರಲ್ಲಿ ಅಧಿಸೂಚಿಸಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಮತ್ತು ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 12-04-2016 ರಂದು ನಡೆಸಲಾದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಫಲಿತಾಂಶವನ್ನು ಆಯೋಗದ ಅಂತರ್ಜಾಲ "http://kpsc.kar.nic.in/Results ದಲ್ಲಿ ಪ್ರಕಟಿಸಿದೆ.

ಬಾಬು/ಕೆಎಂ